

ಸಾಧ್ಯತೆಗಳ ಅನುಭೂತಿಯನ್ನು ಅನುಭವಿಸುವ ಸೊಬಗು ದೃಶ್ಯಕಲೆಗಷ್ಟೇ ಗೊತ್ತು! ಅಷ್ಟೇನೂ ಸಾಂಸ್ಥೀಕರಣಗೊಳ್ಳದ, ಸಾಧಾರಣವಾಗಿ ಒಗ್ಗೂಡದ, ಒಗ್ಗಟ್ಟಿಲ್ಲದ ದೃಶ್ಯಕಲಾರಂಗದಲ್ಲಿ ಇಂತಹ ಸೃಜನಶೀಲ ಚೇಷ್ಟೆಗಳೇ ಸ್ವಾತಂತ್ರ್ಯದ ಗಾಂಭೀರ್ಯದ ಮನೋಭೂಮಿಕೆಯನ್ನು ಪ್ರವೇಶಿಸಲು ಇರುವ ಸುಲಭೋಪಾಯಗಳು.

ಚಿತ್ರಕಲಾ ರಂಗದಲ್ಲಿ ತೊಡಗಿಕೊಂಡಿರುವ ನನಗೆ ಚಿತ್ರಕಲಾ ರಂಗವು ಕೊಟ್ಟಿರುವ ಸ್ವಾತಂತ್ರ್ಯ ಎಂದರೆ ಅರ್ಧ ದಶಕಕ್ಕೊಮ್ಮೆ ನನ್ನೊಳಗಿನ 'ಹೊಸ ನನ್ನನ್ನೇ' ಹೆಕ್ಕಿ ತೆಗೆವುದಾಗಿದೆ. ಕಲೆಯ ಬೋಧನೆ, ಕಲಾಬರವಣಿಗೆ, ಪ್ರವಾಸ ಕಥನದ ಪ್ರಯೋಗ, ಗ್ರಾಫಿಕ್ ನಾವೆಲ್ ಚಿತ್ರ ರಚನೆ, ಸಾಮಾಜಿಕ ಜಾಲತಾಣಗಳೆಂಬ ನವೀನ ಗ್ಯಾಲರಿ ಸಮುಚ್ಚಯದ ಲಭ್ಯತೆಯಿಂದಾಗಿ ಸಣ್ಣ ಕಥೆ, ಗಾದೆಗಳ ಸೃಷ್ಟಿ– ಇಂತಹ ಹಲವು ಪ್ರಯೋಗಗಳು ಸುತ್ತಲಿನ ನಿರ್ದಿಷ್ಟ ಸಮಾಜೋ–ರಾಜಕೀಯ ಘಟನೆಗಳ ಪ್ರೇರಣೆಯಿಂದ, ಒತ್ತಡದಿಂದ ಮೂಡಿಬಂದ ಮಾಧ್ಯಮಗಳು. ಒಮ್ಮೊಮ್ಮೆ ಪ್ರಭುತ್ವದ ಹಿಡಿತದಿಂದ ಬಚಾವಾಗಲು ಈ ಉಪಾಯಗಳು ಎಂದೆನಿಸಿದರೆ, ನಾನೇ ಪ್ರಭುತ್ವದ ಭಾಗವಾಗಿರುವಾಗ (ನಾನು ಟ್ರಾಫಿಕ್‌ನಲ್ಲಿ ಸಿಲುಕಿಲ್ಲ, ನಾನೇ ಟ್ರಾಫಿಕ್ ಎಂಬರ್ಥ) ಈ ಕಣ್ಣಾಮುಚ್ಚಾಲೆ ಆಟವು ಕೇವಲ ಮುಗಿದ ಮಾದರಿಯ ಮೇಲ್ಪದರದ ಚರ್ಚಾಪಟುತ್ವದ ಬಾಯಿ ಚಪಲದ ತಾತ್ವಿಕ ಪರಿಕಲ್ಪನೆಗಳಾಗಿರಬಹುದು ಎನ್ನಿಸಿಬಿಡುತ್ತದೆ.

ನನ್ನ ಅರ್ಥದ ಸ್ವಾತಂತ್ರ್ಯದಲ್ಲಿ, ಸ್ವಾತಂತ್ರ್ಯ ಎಂಬುದು ಒಂದು ಸ್ವತಂತ್ರವಾದ 'ಸಂಪಾದನೆ'. ಸೃಜನಶೀಲ ರಂಗದಲ್ಲಿದ್ದು, ಇತರೆ ಮುಖ್ಯ ರಂಗಗಳ, ಇದೇ ಕುರಿತಾದ ವ್ಯಾಖ್ಯಾನದ ಒಳತಿರುಳನ್ನು ಸುಮ್ಮನೆ ಹಾಗೆ ಸಂಸ್ಕರಣವಿಲ್ಲದೆ, ಸಾಗಲು ಬಿಟ್ಟು ಬಿಡುವುದು ನೈತಿಕವಾಗಿ ನಿಜವಾದ ಕ್ರಿಯಾಶೀಲತೆ ಆಗಲಾರದು. ಒಂದೊಮ್ಮೆ ವಿರೋಧಪಕ್ಷದ ಛಾಯೆಯುಳ್ಳ, ನನ್ನೊಳಗಿನ ಸಮಕಾಲೀನ ಕಲೆಯ ಸ್ವಾಯತ್ತ ಗುಣಕ್ಕೆ ಎರವಾಗುವ, ಅಥವಾ ಭಿನ್ನವೂ ಆಗುವ ಸಮಾಜೋ ರಾಜಕೀಯ ಆಗುಹೋಗುಗಳಿಗೆ ದೃಶ್ಯ ಭಾಷೆಯ ಮತ್ತು ಅದರ ವ್ಯಾಖ್ಯಾನದ ಭಾಷೆಯ ಮೂಲಕ ಪ್ರತಿರೋಧ ಸೃಷ್ಟಿಸುವುದೂ ನಿಜವಾದ ಸ್ವಾತಂತ್ರ್ಯ.

ಸಾಮಾಜಿಕ ಜಾಲತಾಣ ಮತ್ತು ಅಭಿವ್ಯಕ್ತಿ ಮಾಧ್ಯಮಗಳು – ಇವೆರಡೂ ಮಾಧ್ಯಮಗಳು ಎರಡು ವಿಭಿನ್ನ ರೀತಿಯಲ್ಲಿ ದೇಶೀಯ ಪ್ರಜ್ಞೆಯನ್ನು ಅಂತರರಾಷ್ಟ್ರೀಯಗೊಳಿಸಲು ನನಗೆ ಬಹಳ ಸಹಾಯಕವಾಗಿವೆ. ಗಾಂಧೀಜಿಯ 'ನಿರೂಪಣಾ ಇತಿಹಾಸ'ವು (ಅಂದರೆ ಕಲಾತ್ಮಕವಾಗಿ ಕಳೆದೊಂದು ಶತಮಾನದಲ್ಲಿ ಗಾಂಧೀತತ್ವ ಹೇಗೆ ಮೂಡಿಬಂದಿದೆ ಎಂಬ ಇತಿಹಾಸ) ಕಲಾ ಇತಿಹಾಸಕಾರನಾಗಿ, ನನಗೆ ವೈಯಕ್ತಿಕವಾಗಿ ಚಿತ್ರರಚನೆಯಲ್ಲಿ ಸ್ವಾತಂತ್ರ್ಯದ ಬಹಳ ಅಮೂರ್ತ ಆಯಾಮಗಳನ್ನು ತೆರೆದು ತೋರಿಸಿಕೊಟ್ಟಿದೆ. ಪಕ್ಷಾತೀತವಾಗಿ ದೇಶೀಯ ನೆಲೆಯಲ್ಲಿ ಆದರ್ಶವಾಗಿ ಒದಗಿ ಬರುವ/ಬರುತ್ತಿರುವ ಗಾಂಧೀ ಎಂಬ ಬೃಹತ್ ಪದಕೋಶವು, ವಿದೇಶಿ ನೆಲೆಯ ಪಾಪ್ ಚೀಪ್ ಸಿನಿಮಾಗಳಲ್ಲೂ ಸಹ, 'ನಾನು ಗಾಂಧಿಯಂತೆ, ನಾನೇನು ಗಾಂಧಿಯೇ' ಇತ್ಯಾದಿಯಾಗಿ ಬಳಕೆಗೊಂಡು, ನಾಯಕರಲ್ಲದೆ ಕಳ್ಳಕಾಕರೂ ಸಹ ತಮ್ಮನ್ನು ಸಮರ್ಥಿಸಿಕೊಳ್ಳಬಯಸುವ ಅಂಶವಾಗಿರುವುದು ಅಮೋಘ. ಭಾರತೀಯ ಕಲೆಯ ಸಾರವನ್ನು ಎಲ್ಲೆಡೆ ಹರಡಲು ಇನ್ನೂ ಸಾಂಸ್ಥೀಕರಣವು ಒದ್ದಾಡುತ್ತಿರುವಾಗ, ನನ್ನ ರಾಷ್ಟ್ರಪಿತನ ಕಲಾತ್ಮಕ ನಿರೂಪಣೆಯ ಇತಿಹಾಸವು ಅಲ್ಲೆಲ್ಲ ಜನಮನದಲ್ಲಿ ಹಾಸುಹೊಕ್ಕಾಗಿರುವ ಪಾಠವು, ನನ್ನ ಸ್ವಾತಂತ್ರ್ಯದ ಕಲ್ಪನೆಯ ಹೊತ್ತಗೆಯ ಮುನ್ನುಡಿ.

ಪ್ರತಿಕ್ರಿಯಿಸಿ: **feedback@sudha.co.in**

